# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s PSG Energy Private Limited ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Tunga Renewable Energy Private Limited ಕಂಪನಿಯವರಿಗೆ ವರ್ಗಾಯಿಸುವ ಕುರಿತು.

ನಂ 816
ದಿನಾಂಕ 23/4/21

<u>ಓದಲಾಗಿದೆ:</u>

1. ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 180 ಎನ್‌ಸಿಇ 2020, ದಿನಾಂಕ:20.10.2020
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ:KREDL/ 08/TREPL - 128.8 MW (PSGEPL - 50MW)/Koppal/F - 2023/2021/622, ದಿನಾಂಕ: 04.02.2021

<u>ಪ್ರಸ್ತಾವನೆ:-</u>

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದನ್ವಯ M/s PSG Energy Private Limited ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕಿನ ಗುನ್‌ಹಾಲ್, ಹುನ್ನಿಹಾಲ್, ನಲ್ಲೋಲ್, ತಾರಲ್‌ಕಟ್ಟಿ, ಯಪ್ಪಲ್‌ದಿನ್ನಿ, ಯದ್ದೋನಿ, ಉಪ್ಪಲ್‌ದಿನ್ನಿ, ಹಿರೇವಂಕಲ್ ಕುಂಟೆ, ಮಾಟಲ್‌ದಿನ್ನಿ, ಕಲಭಾವಿ, ಚಿಕ್ಕರ್ಲಿಹಳ್ಳಿ, ಜರ್ಕುಂಟೆ, ಕುಟಕ್‌ಮಾರಿ, ಬುತ್‌ಕುಂಟೆ, ಕುರುಬನಹಾಲ್, ನರೇಬೆಂಚಿ, ಕೋಲೇಹಾಲ್ ಮತ್ತು ಕಂತ್ಕೂರ್ ಗ್ರಾಮಗಳಲ್ಲಿ 50 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ವಂತ ಬಳಕೆ ಮಾಡಿಕೊಳ್ಳಲು ಅಥವಾ ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ಷರತ್ತಿಗೊಳಪಟ್ಟು ಹಂಚಿಕೆ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್.ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೇಲಿನ ಆದೇಶದನ್ವಯ M/s PSG Energy Private Limited ಕಂಪನಿಗೆ ಹಂಚಿಕೆಯಾಗಿರುವ 50 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Tunga Renewable Energy Private Limited ಕಂಪನಿಯವರಿಗೆ ವರ್ಗಾವಣೆ ಮಾಡಿ, ಸದರಿ ಸಾಮರ್ಥ್ಯವನ್ನು 129.8 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ M/s Tunga Renewable Energy Private Limited ಇವರು ಕೆ.ಆರ್.ಇ.ಡಿ.ಎಲ್.ನ್ನು ಕೋರಿರುವುದಾಗಿ ಸದರಿ ವರ್ಗಾವಣೆಗೆ ಎರಡು ಕಂಪನಿಯವರು ಸಹಮತಿ ನೀಡಿರುವುದಾಗಿ ಹಾಗೂ ಸದರಿ ವರ್ಗಾವಣೆಗೆ ಅನ್ವಯವಾಗುವ ವರ್ಗಾವಣೆ ಶುಲ್ಕವನ್ನು ಪಾವತಿಸಿಕೊಂಡಿರುವುದಾಗಿ ಮತ್ತು 50 ಮೆ.ವ್ಯಾ ಸಾಮರ್ಥ್ಯವನ್ನು 129.8 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಸಂಬಂಧ ಡಿಪಿಆರ್ ಸಲ್ಲಿಸಿದ್ದು, ನಿಗದಿತ ಶುಲ್ಕವನ್ನು ಕೆಆರ್‌ಇಡಿಎಲ್‌ಗೆ ಪಾವತಿಸಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಸದರಿಯವರು ಯೋಜನೆಯನ್ನು ಅನುಷ್ಠಾನಗೊಳಿಸಲು ಅಕ್ಷಾಂಶ ಮತ್ತು ರೇಖಾಂಶ ಸ್ಥಳದಲ್ಲಿ 59 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (2200 ಕಿ.ವ್ಯಾ. ಸಾಮರ್ಥ್ಯದ ಟರ್ಬೈನ್‌ಗಳು) ಅಳವಡಿಸುವುದಾಗಿ ತಿಳಿಸುತ್ತಾ, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತಿಗೆ ಸಂಬಂಧಿಸಿದಂತೆ ಮೂಲ ಆದೇಶದಲ್ಲಿ ನಮೂದಿಸಿರುವ ಸ್ವಂತ ಬಳಕೆ / ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡುವ ಬದಲಾಗಿ, ಕೇಂದ್ರ ಸರ್ಕಾರದ Power Grid Corporation Of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ವರ್ಗದ ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಯೋಜನೆಯ ಪ್ರಸ್ತಾವನೆಯ ಸಂಬಂಧ ಸದರಿ ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

Wind Section
Inward No. 1015
Date 2/6/21
Sig ..........

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ :ಎನರ್ಜಿ 74 ಎನ್‌ಸಿಇ 2021**
**ಬೆಂಗಳೂರು ದಿನಾಂಕ:21.04.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s PSG Energy Private Limited ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕುಗಳ ಗುನ್‌ಹಾಲ್, ಹುನ್ಸಿಹಾಲ್, ನಲ್ಗೋಲ್, ತಾರಲ್‌ಕಟ್ಟಿ, ಯಪ್ಪಲ್‌ದಿನ್ನಿ, ಯದ್ದೋನಿ, ಉಪ್ಪಲ್‌ದಿನ್ನಿ, ಹಿರೇವಂಕಲ್ ಕುಂಟಿ, ಮಾಟಲ್‌ದಿನ್ನಿ, ಕಲಭಾವಿ, ಚಿಕ್ಕರ್ಲಿಹಳ್ಳಿ, ಜರ್ಕುಂಟಿ, ಕುಟಕ್‌ಮಾರಿ, ಬುತ್ ಕುಂಟಿ, ಕುರುಬನಹಾಲ್, ನರೇಬೆಂಚಿ, ಕೊಲೇಹಾಲ್ ಮತ್ತು ಕಂತ್ಕೂರ್ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Tunga Renewable Energy Private Limited ಕಂಪನಿಯವರಿಗೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 129.8 ಮೆ.ವ್ಯಾಗೆ ಹೆಚ್ಚಿಸಿ ಆದೇಶಿಸಿದೆ.

**Geographical area description for 129.8 MW capacity wind power project of M/s Tunga Renewable Energy Private Limited**

| Sl. No. | Geographical area description of the project | Near by Villages of the proposed area & District | Existing (Transfer) capacity in MW | Capacity on enhance ment in MW | Total capacity in MW |
|---|---|---|---|---|---|
| 1 | The identified area is covered by Private land near Kustagi. The area is having several peaks and is covered in the following Geographical co-ordinates as:<br>**Point A**:Latitude**:** 15°33'48.16"N, Longitude: 76°10'8.14''E<br>**Point B**:Latitude: 15°45'0"N, Longitude: 76°10'0''E<br>**Point C**:Latitude: 15°45'0"N, Longitude: 76°15'0''E<br>**Point D**:Latitude:15°33'46.8"N, Longitude: 76°15'0''E<br><br>Peaks: 635, 659, 662, 675, 654, 625, 642, 630, 656, 647, 632 & 644m Amsl.<br><br>Toposheet No:57 A/2 | Kolehal, Gunhal, Hunsihal, Nalgol, Taralkatti, Yappaldinni, Uppaldinni, Hire Wankalkunti, Mataldinni, Kalbhavi, Chikka Arihalli, Jarkunti, Kutakmari, Budkunti, Yeddoni, Kurbanal, Narebenchi and Kandkar villages of Yelburga and Kustagi taluks, Koppal District | 50 MW | 79.8 MW | 129.8 MW (59 Nos X 2200 kW) |